# ನಲಿ ಕಲಿ ಕ್ರಿಯಾಶೀಲ ಶಿಕ್ಷಕರು

## ಶಿವಮೊಗ್ಗ ಜಿಲ್ಲೆ



# ಸೇತುಬಂಧ ಶಿಕ್ಷಣ

**2021-22**

## 4ನೇತರಗತಿ ಮಕ್ಕಳ ಕಲಿಕೆಗಾಗಿ

**(ಹಿಂದಿನ ತರಗತಿಯ ಕಲಿಕಾಫಲಗಳನ್ನು ಆಧರಿಸಿದಂತೆ)**

# ಕನ್ನಡ

# ಅಭ್ಯಾಸದ ಹಾಳೆಗಳು

## ಮಾರ್ಗದರ್ಶನ

**ಶ್ರೀಯುತ ಫಣೀಶ್**
**ಹಿರಿಯ ಉಪನ್ಯಾಸಕರು**
**ಡಯಟ್ ಶಿವಮೊಗ್ಗ**

**ಸಹಕಾರ : ಶ್ರೀಮತಿ ಲೀಲಾವತಿ, ಉಪನ್ಯಾಸಕರು, ಡಯಟ್ ಶಿವಮೊಗ್ಗ.**

## ಸಂಪನ್ಮೂಲ ವ್ಯಕ್ತಿಗಳು

*******

**ನಿರ್ವಾಹಕರು : ಶ್ರೀ ರೇಣುಕಾರಾಧ್ಯ ಮತ್ತು ಶ್ರೀಮತಿ ಫೌಜಿಯ ಸರವತ್.**

ಶ್ರೀಮತಿ ಯಶೋಧ.ವಿ.
ಸ.ಹಿ.ಪ್ರಾ.ಶಾಲೆ ವಾಟಗಾರು
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ಭಾಗೀರಥಿ
ಸ.ಕಿ.ಪ್ರಾ.ಶಾಲೆ ಗುತ್ಯಪ್ಪಕಾಲೋನಿ
ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಯುತ ಜಾವೀದ್ ಪಾಷಾ
ಸ.ಹಿ.ಪ್ರಾ.ಶಾಲೆ ಕಂದಿಕೆರೆ
ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಶ್ರೀಮತಿ ಶ್ರೀದೇವಿ.ಡಿ.ಜಿ.
ಸ.ಹಿ.ಪ್ರಾ.ಶಾಲೆ ಅರಸನಘಟ್ಟ ತಾಂಡ
ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ಕವಿತ.ಕೆ.ಬಿ.
ಸ.ಹಿ.ಪ್ರಾ.ಶಾಲೆ ಇಡುಕಿನ ಹೊಸಕೊಪ್ಪ
ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ರೇಖಾ ಪಿ ಕುಲಾಲ್
ಸ.ಹಿ.ಪ್ರಾ. ಶಾಲೆ ನೂಲಿಗ್ಗೇರಿ
ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ರೇಖಾ.ಎಂ.ಹೆಚ್
ಸ.ಕಿ.ಪ್ರಾ. ಶಾಲೆ ಕಲ್ಲುರ್ಚಿ
ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ತಾಂತ್ರಿಕ ಸಹಕಾರ
ಶ್ರೀಯುತ ಶಿವಶಂಕರಯ್ಯ.ಹೆಚ್.ಎಲ್
ಸ.ಕಿ.ಪ್ರಾ.ಶಾಲೆ ಬಿ.ಸಿ ಪಾಳ್ಯ
ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

**ಕೊಡುಗೆ**
**"ನಲಿಕಲಿ ಕ್ರಿಯಾಶೀಲ ತಾರೆಯರು"**

Edit with WPS Office

ತರಗತಿ. 4 ವಿಷಯ : ಕನ್ನಡ ದಿನ 1

**ಒಗಟು ಬಿಡಿಸಿ**

೧. ಗೂಡಿನಲ್ಲಿನ ಪಕ್ಷಿ ನಾಡೆಲ್ಲ ನೋಡುತ್ತದೆ- ಕಣ್ಣು

೨. ಕಾಸಿನ ಕುದುರೆಗೆ ಬಾಲದ ಲಗಾಮು- ಸೂಜಿ ದಾರ

೩. ಎಲೆ ಇಲ್ಲ, ಸುಣ್ಣ ಇಲ್ಲ, ಬಣ್ಣವಿಲ್ಲ ತುಟಿ ಕೆಂಪಗಾಗಿದೆ, ಮಳೆಯಿಲ್ಲ , ಬೆಲೆಯಿಲ್ಲ , ಮೈ ಹಸಿರಾಗಿದೆ- ಗಿಳಿ

೪. ಮನೆ, ಮನೆಗೆರಡು ಬಾಗಿಲು, ಬಾಗಿಲ ಮುಂದೆ , ಮುಚ್ಚಿದರೆ ಹಾನಿ ಇದೇನು?- ಮೂಗು, ಬಾಯಿ

೫. ಸುತ್ತ ಮುತ್ತ ಸುಣ್ಣದ ಗೋಡೆ, ಎತ್ತ ನೋಡಿದರೂ ಬಾಗಿಲಿಲ್ಲ ಇದು ಏನು?- ಮೊಟ್ಟೆ

೬. ಅಂಗಳದಲ್ಲಿ ಹುಟ್ಟುವುದು, ಅಂಗಳದಲ್ಲಿ ಬೆಳೆಯುವುದು, ತನ್ನ ಮಕ್ಕಳ ಹಂಗಿಸಿ ಮಾತಾಡುವುದು ಇದು ಏನು?- ಕೋಳಿ

೭. ಇದ್ದಲು ನುಂಗುತ್ತ , ಗದ್ದಲ ಮಾಡುತ್ತಾ, ಉದ್ದಕ್ಕೂ ಓಡುತ್ತಾ ಮುಂದಕ್ಕೆ ಸಾಗುವ ನಾನ್ಯಾರು?- ರೈಲು

**ಈ ಹಾಡು ಕೇಳಿಸಿ ಹಾಡಿನ ಹೆಸರು ಮುಟ್ಟಿ ಹಾಡು ಕೇಳಿಸಿ**

**ಇಲ್ಲಿ ಮುಟ್ಟಿರಿ - ಹೇಳಿದ್ದು ಸುಳ್ಳಾಗಬಹುದು ನೋಡಿದ್ದು ಸುಳ್ಳಾಗಬಹುದು**


ರೇಣುಕಾರಾಧ್ಯ
ಸ.ಕಿ.ಪ್ರಾ.ಶಾಲೆ ಸಂಕ್ಲಾಪುರ


# ಬಾವಿಯಲ್ಲಿ ಚಂದ್ರ

ವಿದ್ಯಾರ್ಥಿಯ ಹೆಸರು : ____________________ ತರಗತಿ : ದಿನಾಂಕ:-__________

ನಿರೀಕ್ಷಿತ ಕಲಿವಿನ ಫಲಿತ : ಕಥನ, ವಿವರಣೆ ಮತ್ತು ಒಗಟುಗಳನ್ನು ಆಲಿಸುವುದರ ಜೊತಗೆ ಅರ್ಥ ಮಾಡಿಕೊಳ್ಳುವರು.

1. ಈ ಚಿತ್ರಗಳನ್ನು ಗಮನಿಸಿ ಅದರ ಬಗ್ಗೆ ಮಾತನಾಡು. ಬಾವಿಯಲ್ಲಿನ ಪ್ರತಿಬಿಂಬದಲ್ಲಿ ಚಂದ್ರನ ಚಿತ್ರವನ್ನು ಬರೆ.





2. ಈ ಪದ್ಯವನ್ನು ರಾಗವಾಗಿ ಹಾಡಿ ಪ್ರಾಸಪದಗಳಿಗೆ ವೃತ್ತ ಹಾಕು.

| | | |
|---|---|---|
| ತಿಂಗಳ ಬೆಳಕಿನ ಇರುಳಿನಲಂದು<br>ಅಮ್ಮನು ಕೆಲಸದೊಳಿರುತಿರೆ ಕಂಡು<br>ಗೋಪಿಯು ಪುಟ್ಟುವು ಹೊಗಡೆ ಬಂದು<br>ಬಾವಿಗೆ ಇಣುಕಿದರು | ಚಂದ್ರನ ಮೇಲಕೆ ಎತ್ತಲಿಕೆಂದು<br>ಬಾವಿಯ ಹಗ್ಗಕೆ ಕೊಕ್ಕೆಯ ಬಿಗಿದು<br>ದೂರದಿ ಗೋಪಿಯ ನಿಲ್ಲಿಸಿ ಪುಟ್ಟು<br>ಹಗ್ಗವನಿಳಿಸಿದನು. | ಎಳೆತದ ರಭಸಕೆ ಪುಟ್ಟುವು ಬಿದ್ದ<br>ಮೆಲ್ಲನೆ ಮನೆ ಕಡೆ ನೋಡುಲೆದ್ದ<br>ತಂಗಿಗೆ ಆಗಸ ತೋರುತಲೆಂದ<br>ಗೋಪಿ ನೋಡಲ್ಲಿ |
| ಬಾವಿಲಿ ಚಂದ್ರನ ಬಿಂಬವ ಕಂಡು<br>ಚಂದ್ರನು ಬಾವಿಗೆ ಬಿದ್ದನು ಎಂದು<br>ಅಯ್ಯೋ ಪಾಪವೇ ಎನ್ನುತಲೊಂದು<br>ಕೊಕ್ಕೆಯ ಹುಡುಕಿದರು. | ಹಗ್ಗದ ಕೊಕ್ಕೆಯು ಕಲ್ಲಿಗೆ ಸಿಕ್ಕಿ<br>ಪುಟ್ಟುವು ಚಂದ್ರನು ಸಿಕ್ಕೇ ಸಿಕ್ಕ<br>ಎನ್ನುತಾ ಬಲದಿಂದೆಳೆಯೇ<br>ಹಗ್ಗವು ತುಂಡಾಯ್ತು | ಚಂದ್ರನ ಮೇಲಕೆ ಏರಿಸಿ ಬಿಟ್ಟೆ<br>ನಮ್ಮಯ ದೇವರ ಬದುಕಿಸಿ ಬಿಟ್ಟೆ<br>ಅಮ್ಮಗೆ ಗೊತ್ತಾದರೆ ನಾಕೆಟ್ಟೆ<br>ಎಂದೋಡಿದ ಪುಟ್ಟು |

3. ಈ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಬರೆಯಿರಿ

   1. ಗೋಪಿ ಪುಟ್ಟು ಯಾವಾಗ ಹೊರಗಡೆ ಬಂದರು?

   ______________________________

   2. ಕೊಕ್ಕೆಯನ್ನು ಏಕೆ ತಂದರು?

   ______________________________

   3. ಚಂದ್ರನನ್ನು ಎಲ್ಲಿ ಕಂಡರು?

   ______________________________

   4. ಈ ಪದ್ಯದಲ್ಲಿ 'ನಮ್ಮಯ ದೇವರು'ಎಂದು ಯಾರಿಗೆ ಹೇಳಿದ್ದಾರೆ?

   ______________________________

Scanned by CamScanner

4. ಈ ಪದ್ಯದಲ್ಲಿ ಬಂದಿರುವ ಒತ್ತಕ್ಷರ ಪದಗಳನ್ನು ಹೆಕ್ಕಿ ಓದು ಮತ್ತು ಬರೆ.

5. ಈ ಚಿತ್ರ ಕಥೆಯನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

ಒಂದು ದಟ್ಟವಾದ  ನಲ್ಲಿ ಒಂದು  ಇತ್ತು. ಅದು ತಾನೇ ತುಂಬಾ ದೊಡ್ಡ ಪ್ರಾಣಿ ಅಂತ ಜಂಭ ಪಡುತ್ತಿತ್ತು. ಆ  ನ  ಗಳೆಲ್ಲಾ ಸೇರಿ,  ಯ ಜಂಭವನ್ನು ಮುರಿಯಲು ಮನಸ್ಸು ಮಾಡಿದವು. ಒಂದು ಸಣ್ಣ   ಸೊಂಡಿಲ ಒಳಗೆ ಸೇರಿಕೊಂಡು ಕಚ್ಚಲು ಆರಂಭಿಸಿತು.  ಏನು ಮಾಡಿದರೂ  ಹೊರಗೆ ಬರಲಿಲ್ಲ. ಆಗ  ತನ್ನ ಜಂಭವನ್ನು ಬಿಟ್ಟು  ಯನ್ನು ಬೇಡಿಕೊಂಡಿತು. ಆಗ  ಹೊರಕ್ಕೆ ಬಂದಿತು. ಅಂದಿನಿಂದ  ಜಂಭ ಪಡುವುದನ್ನು ಬಿಟ್ಟಿತು. ಎಲ್ಲಾ  ಗಳೊಂದಿಗೆ ಸಂತೋಷದಿಂದ ಇದ್ದಿತು.

ಪ್ರಶ್ನೆಗಳು;–

1) ಆನೆ ಎಲ್ಲಿ ವಾಸವಾಗಿತ್ತು?

2) ಯಾರ ಜಂಭವನ್ನು ಮುರಿಯಲು ಪ್ರಾಣಿಗಳು ಮನಸ್ಸು ಮಾಡಿದವು?

3) ಆನೆ ತನ್ನ ಜಂಭವನ್ನು ಬಿಡಲು ಯಾರನ್ನು ಬೇಡಿಕೊಂಡಿತು?

4) ಆನೆ ತನ್ನ ಜಂಭ ಏಕೆ ಬಿಟ್ಟಿತು?

6. ಒಗಟು ಬಿಡಿಸಿ.

ಹಿಡಿದರೆ ಹಿಡಿ ತುಂಬ
ಬಿಟ್ಟರೆ ಮನೆ ತುಂಬ
ನಾನು ಯಾರು ಗೊತ್ತೆ?

ಸಂತೆಯಿಂದ ತರ್ತಾರೆ,
ಕೊಯ್ಯುವಾಗ ಅಳ್ತಾರೆ
ನಾನು ಯಾರು?

ಊರಿಗೆಲ್ಲಾ ಒಂದೇ
ಕಂಬಳಿ ನಾನು
ಯಾರು?

ಕಾಲಿಲ್ಲದ ಕುಂಟ
ಸರಸರ ಓಡುತ್ತೇನೆ
ನಾನು ಯಾರು?

7. ಸರಿಯಾದ ಪದಗಳ ರೂಪಕ್ಕೆ ವೃತ್ತ ಹಾಕು

| ಹಾಗಸ – ಆಗಸ | ಇರುಳು – ಯಿರುಳು | ಬಾವಿ – ಭಾವಿ | ರಬಸ – ರಭಸ | ಹೊರಗಡೆ – ಒರಗಡೆ |
|---|---|---|---|---|

ಮಾರ್ಗದರ್ಶಕರ ಸಹಿ ದಿನಾಂಕದೊಂದಿಗೆ

Scanned by CamScanner


4 ನೇ ತರಗತಿ ಕನ್ನಡ "ಉದ್ಯಾನವನದಲ್ಲಿ ಒಂದು ದಿನ"

ಸಾಮರ್ಥ್ಯ: ಸೂಚನಾ ಫಲಕಗಳಲ್ಲಿರುವ ಸರಳ ಸೂಚನೆಗಳನ್ನು ಓದುವುದು. ಚಿತ್ರಪಟಗಳನ್ನು ಅರ್ಥೈಸಿ ಕೊಳ್ಳುವುದು

ಚಟುವಟಿಕೆ: 1 ಸರಳ ಸಂಭಾಷಣೆ (ನಲಿ-ಕಲಿ) 3 ನೇ ತರಗತಿ 3 ನೇ ಮೈಲಿಗಲ್ಲಿನ 27 ನೇ ಮೆಟ್ಟಿಲಿನ ವಿಡಿಯೋ ತೋರಿಸುವುದು

ಚಟುವಟಿಕೆ: 2: 33 ನೇ ಮೆಟ್ಟಿಲಿನ ರಾದ 'ಉದ್ಯಾನವನದಲ್ಲಿ ಒಂದು ದಿನ ಪಠ್ಯಾಧಾರಿತ ಸಂಭಾಷಣೆಯ ವಿಡಿಯೋ ಕ್ಲಿಪ್ಪಿಂಗ್ ಕೇಳಿಸುವುದು

ಚಟುವಟಿಕೆ: 3: ಕೆಳಗಿನ ಚಿತ್ರನೋಡಿ ವಿವರಣಾ ವಾಕ್ಯ ಬರೆ




______
______
______
______
______

ಚಟುವಟಿಕೆ: 4: ಮೇಲಿನ ಚಿತ್ರ ಗಮನಿಸಿ ಉತ್ತರಿಸು

1. ಕೊಳದಲ್ಲಿರುವ ಬಾತುಕೋಳಿಗಳ ಸಂಖ್ಯೆ — (2 . 4)
2. ಚಿತ್ರದಲ್ಲಿದ್ದ ಹೂವುಗಳ ಸಂಖ್ಯೆ — (3 . 5)

ಚಟುವಟಿಕೆ: 5: ಉದ್ಯಾನವನದಲ್ಲಿ ಒಂದು ದಿನ ಪಠ್ಯದಲ್ಲಿ ಬಂದ ವಾಕ್ಯಗಳನ್ನು ಪಟ್ಟಿ ಮಾಡು. ಹೇಳುವೆಯಾ?


ಚಟುವಟಿಕೆ: 6: ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತವಾಕ್ಯ ಬರೆ.

1. ನೀರು: ನೀರನ್ನು ಮಿತವಾಗಿ ಬಳಸಿರಿ
2. ಹೂವು: ______

3. ಶಾಲಾಗಿ ____________________

4. ಹಾಲು ____________________

ಚಟುವಟಿಕೆ : 7 : ಹೊಂದಿಸಿ (ಚಿತ್ರಗಳನ್ನು ವಾಕ್ಯಗಳಿಗೆ)




1 ಉದ್ಯಾನವನದಲ್ಲಿ ಹೂ ಕೀಳಬೇಡಿ

2 ಕಸವನ್ನು ಕಸದ ತೊಟ್ಟಿಯಲ್ಲಿಯೇ ಹಾಕಿರಿ

ಚಟುವಟಿಕೆ : 8 3 ನೇ ಮೈಲಿಗಲ್ಲಿನಲ್ಲಿ ಬಂದ ವಾಚಕಗಳನ್ನು ಶಿಕ್ಷಕರಿಂದ ಪಡೆದು ಪ್ರತಿ ಪುಟದಲ್ಲಿರುವ ಚಿತ್ರ ನೋಡಿ ವಾಕ್ಯಗಳನ್ನು ಓದುವೆಯಾ?

ಚಟುವಟಿಕೆ : 9 ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯುವೆವು

ದೂರ × ____________ (ಹತ್ತಿರ. ಕೆಳಗೆ)

ಮೇಲೆ × ____________ (ದೂರ. ಕೆಳಗೆ)

ಮುಂದೆ × ____________ (ಸರಿ. ಹಿಂದೆ)

ಹಿಂದೆ × ____________ (ಮೇಲೆ. ಮುಂದೆ)

ತಪ್ಪು × ____________ (ಹಿಂದೆ. ಸರಿ)

ಚಟುವಟಿಕೆ 10. ಗುಂಪಿಗೆ ಸೇರದ ಪದ ಗುರುತಿಸಿ ಚೌಕದಲ್ಲಿ ಬರೆ

1 ಶಾಲೆ. ಮರ. ಗಿಡ. ಬಳ್ಳಿ. ____________

2 ಹೂ. ಕುಸುಮ. ಗುಲಾಬಿ. ಪುಷ್ಪ ____________

3 ನೀರು. ಜಲ. ಮನೆ. ಉದಕ ____________

4 ಸುಂದರ. ಚೆಂದ. ಹಂದರ. ಸೊಬಗು ____________

ಚಟುವಟಿಕೆ. 11. ಈ ಅಕ್ಷರಗಳನ್ನು ಸರಿಯಾದ ರೀತಿಯಲ್ಲಿ ಜೋಡಿಸಿ ಪದರಚಿಸಿ ಬರೆ.

1. ವ ಯ ಲ ಲಾ ಶ [ ]

2. ಸೂ ಕ ವಾ ಫ ಚಿ ಲ [ ]

3. ಣೆ ರ ಹ ದಾ ಉ [ ]

4. ತ್ರ ತ್ರಿ ಛ ಪ [ ]

ಚಟುವಟಿಕೆ. 12 ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

1. ಕೋಟೆಯಲ್ಲಿ ಯಾವ ಯಾವ ಹೂಗಳು ಅರಳಿದ್ದವು?

____________________________________________

2. ಕೊಳದ ಬಳಿ ಇದ್ದ ಸೂಚನಾ ಫಲಕ ಯಾವುದು?

____________________________________________

3. ನೀರನ್ನು ಏಕೆ ಪೋಲು ಮಾಡಬಾರದು?

____________________________________________

4 ರಾಜು ತೋರಿಸಿದ ಚಿತ್ರ ಪತ್ರ ಯಾವುದು?

| 4 | ಮುದ್ದು ಕಂದ | ದಿನ |
|---|---|---|

ವಿದ್ಯಾರ್ಥಿಗಳ ಹೆಸರು: ತರಗತಿ: ದಿನಾಂಕ:

ಕಲಿಕಾ ಫಲಗಳು:

* ಅಕ್ಷರಗಳನ್ನು ಮತ್ತು ಪದಗಳನ್ನು ಸರಿಯಾದ ವಿನ್ಯಾಸ ಅನುಕ್ರಮತೆ ಹಾಗೂ ಸೂಕ್ತ ಅಂತರದೊಂದಿಗೆ ಬರೆಯುವ ಕೌಶಲ ಬೆಳೆಸುವುದು.
* ಉಕ್ತ ಲೇಖನದ ಮೂಲಕ ಪರಿಚಿತ ಪದಗಳನ್ನು ಬರೆಯುವುದು.

1. ಆವರಣದಲ್ಲಿರುವ ಪದಗಳನ್ನು ಬಳಸಿ, ಕತೆಯನ್ನು ಪೂರ್ತಿ ಮಾಡಿ.

(ಕಾಗೆ, ಮಡಿಕೆ, ಕಲ್ಲಿನ, ಬಾಯಾರಿಕೆ, ನೀರಿತ್ತು, ಉಪಾಯ ಸಂತೋಷದಿಂದ)

ಒಂದು ______ ಇತ್ತು. ಅದಕ್ಕೆ ತುಂಬಾ ______ ಯಾಯಿತು. ಅದಕ್ಕೆ ಒಂದು ನೀರಿನ ______ ಕಂಡಿತು. ಮಡಿಕೆಯ ತಳದಲ್ಲಿ ಸ್ವಲ್ಪವೇ ______. ಕಾಗೆ ಒಂದು ______ ಮಾಡಿತು. ಹತ್ತಿರದಲ್ಲೇ ಬಿದ್ದಿದ್ದ ______ ಹರಳುಗಳನ್ನು ತಂದು ಮಡಿಕೆಯಲ್ಲಿ ಹಾಕಿತು. ಆಗ ನೀರು ಮೇಲೆ ಬಂದಿತು. ಕಾಗೆ ಅದನ್ನು ಕುಡಿದು ______ ಹಾರಿ ಹೋಯಿತು.

| 4 | ಮುದ್ದು ಕಂದ | ದಿನ |
|---|---|---|

ವಿದ್ಯಾರ್ಥಿಗಳ ಹೆಸರು : ತರಗತಿ : ದಿನಾಂಕ :

2. ಪದ್ಯವನ್ನು ರಾಗವಾಗಿ ಹಾಡುವುದು.

ಕೂಸು ಇದ್ದ ಮನಿಗೆ ಬೀಸಣಿಗೆ ಯಾತಕ
ಕೂಸು ಕಂದಯ್ಯ ಒಳ ಹೊರಗ । ಆಡಿದರ
ಬೀಸಣಿಗೆ ಗಾಳಿ ಸುಳಿದಾವ ॥

ಆಡಿ ಬಾ ನನ ಕಂದ ಅಂಗಾಲ ತೊಳೆದೇನ
ತೆಂಗಿನ ಕಾಯಿ ತಿಳಿ ನೀರು । ತಕ್ಕೊಂಡು
ಬಂಗಾರ ಮಾರಿ ತೊಳೆದೇನ ॥

ಅಳುವ ಕಂದ ತುಟಿಯು ಹವಳದ ಕುಡಿಹಂಗ
ಕುಡಿ ಹುಬ್ಬು ಬೇವಿನೆಸಳ್ಹಂಗ । ಕಣ್ಣೋಟ
ಶಿವನ ಕೈಯಲಗು ಹೊಳೆದ್ಹಂಗ ॥

ಕಂದಾನ ಕಿರಿಕಿರಿ ಇಂದೇನು ಹೇಳಲಿ
ಬಿಂದಿಗೆ ಹಾಲು ಸುರಿವಂದು । ಚಂಬೀಯು
ಚಂದ್ರಮನ ತಂದು ನಿಲಿಸೆಂದಾ ॥

* ಜನಪದ

3. ಕೆಳಗಿನ ವಾಕ್ಯಗಳನ್ನು ನಕಲು ಮಾಡಿ ಬರೆ.

1. ಕೂಸು ಇದ್ದ ಮನಿಗೆ ಬಿಸಣಿಗೆ ಯಾತಕ

| 4 | ಮುದ್ದು ಕಂದ | ದಿನ |
|---|---|---|

ವಿದ್ಯಾರ್ಥಿ ಹೆಸರು: ತರಗತಿ: ದಿನಾಂಕ:

2. ಅಳುವ ಕಂದನ ತುಟಿಯು ಹವಳದ ಕುಡಿಹಂಗ

[ ]

3. ಚಂದ್ರಮನ ತಂದು ನಿಲಿಸೆಂದಾ

[ ]

4. ಕೊಟ್ಟಿರುವ ಪದಗಳಿಗೆ ಸ್ವಂತ ವಾಕ್ಯ ರಚಿಸಿ.

1. ಕೂಸು : ______________________
2. ಹಾಲು : ______________________
3. ಬೀಸಣಿಗೆ : ______________________

5. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಅಳುವ ಕಂದನ ತುಟಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?

______________________

2. ತಾಯಿಯು ಕಂದನ ಅಂಗಾಲನ್ನು ಯಾವುದರಿಂದ ತೊಳೆಯುತ್ತಾಳೆ?

______________________

3. ಈ ಪದ್ಯದಲ್ಲಿ ಬರುವ ಒತ್ತಕ್ಷರ ಪದಗಳನ್ನು ಬರೆ.

______________________

______________________

| 4 | ಮುದ್ದು ಕಂದ | ದಿನ |
| --- | --- | --- |

ವಿದ್ಯಾರ್ಥಿಯ ಹೆಸರು:     ತರಗತಿ:     ದಿನಾಂಕ:

6. ಕೊಟ್ಟಿರುವ ಸಾಲುಗಳನ್ನು ಪದ್ಯದಲ್ಲಿರುವಂತೆ ಪೂರ್ಣಗೊಳಿಸು.

1. ಆಡಿ ಬಾ ನನ ಕಂದ ______________
2. ಕಂದಾನ ಕಿರಿ ಕಿರಿ ______________
3. ಬಿಸಿಳಿಗೆ ಗಾಳಿ ______________

7. ಉಕ್ತ ಲೇಖನ ಬರೆಸಿ.

1. ಬಂಗಾರ  2. ಹುಬ್ಬು  3. ಚಂದ್ರಮ
4. ಗಾಳಿ  5. ಕಂದಯ್ಯ  6. ತೆಂಗಿನಕಾಯಿ

8. ಅಕ್ಷರಗಳನ್ನು ಮರು ಜೋಡಿಸಿ ಪದ ರಚಿಸಿ.


1. ತಿ ರು ಟ್ಟಿ ಗು ರು
2. ಸಿ ನ ರು ಹ ವ
3. ದ ಟ್ಟು ಪ ನೆ ಆ
4. ಡು ಗಾ ಳು ರ ಮು
5. ಗಾ ನ ಭು ಮ ರ

ಮೇಲಿನ ವೃತ್ತಗಳಲ್ಲಿರುವ ಅಕ್ಷರಗಳನ್ನು ಬಳಸಿ ಪದ ರಚಿಸಿ.

| 4 | ಮುದ್ದು ಕಂದ | ದಿನ |
|---|---|---|

ವಿದ್ಯಾರ್ಥಿ ಹೆಸರು: ತರಗತಿ: ದಿನಾಂಕ:

9.




ಮೇಲಿರುವ ದೀಪದಲ್ಲಿ ಪದಗಳ ಸಹಾಯದಿಂದ ಗಾದೆಯನ್ನು ಪೂರ್ಣಗೊಳಿಸು.

ಮಾದರಿ:

ಕಾಯಕವೇ ಕೈಲಾಸ

1. ಅತಿ ಆಸೆ ______
2. ಹಿತ್ತಲ ಗಿಡ ______
3. ಹಾಸಿಗೆ ಇದ್ದಷ್ಟು ______
4. ಕೈ ಕೆಸರಾದರೆ ______
5. ಎಲ್ಲರ ಮನೆ ದೋಸೆನೂ ______

| 4 | ಮುದ್ದು ಕಂದ | ದಿನ |
|---|---|---|

ವಿದ್ಯಾರ್ಥಿ ಹೆಸರು: ತರಗತಿ: ದಿನಾಂಕ:

10. ಕೆಳಗೆ ನೀಡಿರುವ ಚಿತ್ರಕ್ಕೆ ಸಂಬಂಧಿಸಿದಂತೆ ಅರ್ಥಪೂರ್ಣ ವಾಕ್ಯವನ್ನು ಸೂಕ್ತ ಉತ್ತರದೊಂದಿಗೆ ಬರೆ.



1. ______________________

2. ______________________

3. ______________________

4. ______________________

# ಆಟ

ಚಟುವಟಿಕೆ: 1 ಕನ್ನಡ

ಕಲಿವಿನ ಫಲ: ಸೂಚನೆಗಳನ್ನು ಅನುಸರಿಸಿ ವಿವರಣಾತ್ಮಕ ವಾಕ್ಯಗಳನ್ನು ಬರೆಯುವರು ಕೊಟ್ಟಿರುವ ಪದಗಳ ಆಧಾರದಿಂದ ಅರ್ಥಪೂರ್ಣ ವಾಕ್ಯಗಳನ್ನು ರಚಿಸುವರು

ಕ್ರಮ:- ಮಕ್ಕಳಿಗೆ ಈ ಕೆಳಗಿನ ವಸ್ತುಗಳನ್ನು ಯಾವ ಯಾವ ಚಟುವಟಿಕೆ ಮಾಡಬಹುದೆಂದು ಗುರುತಿಸಲು ಹೇಳುವುದು.

ಬಳಸಬಹುದಾದ ವಸ್ತುಗಳು:-







ಸೂಚನೆಗಳು:-

ಒಬ್ಬರು ಮಾಡಿದ ಚಟುವಟಿಕೆ ಇತರರು ಮಾಡಬಾರದು

ಒಬ್ಬರ ಚಟುವಟಿಕೆಯನ್ನು ಉಳಿದವರು ಗಮನಿಸುವಂತೆ ತಿಳಿಸುವುದು.

ಮಕ್ಕಳು ಮಾಡಿದ ಚಟುವಟಿಕೆಗಳ ಬಗ್ಗೆ ಉಳಿದವರಿಂದ ಮಾಹಿತಿ ವಿವರ ಪಡೆದುಕೊಳ್ಳುವುದು.

ಚಟುವಟಿಕೆ:- 2. ಈ ಕೆಳಗೆ ನೋಡುತ್ತಿರುವ ಆಟಗಳನ್ನು ಹೆಸರು ಹೊಂದಿಸು.


ಲಗೋರಿ.


ಚೌಕಾಬಿಯಾಟ


ಕಲ್ಲಾಟ


ಕೇರಂ.

# ಕೋಲಾಟ

ಚಟುವಟಿಕೆ: 3

ಕಲಿವಿನ ಫಲ:- ತಪ್ಪಿಲ್ಲದಂತೆ ಸ್ಪಷ್ಟ ಹಾಗೂ ನಿರರ್ಗಳವಾಗಿ ಓದುವರು.

ಸೂಚನೆ:- ತಪ್ಪಿಲ್ಲದಂತೆ ಕೆಳಗಿನ ವಾಕ್ಯಗಳನ್ನು ಓದುವುದನ್ನು ಅಭ್ಯಾಸ ಮಾಡಿರಿ.

ಇದು ಗ್ರಾಮೀಣ ಸೊಗಡಿನಿಂದ ಕೂಡಿದ ಆಟವಾಗಿದೆ. ಗ್ರಾಮೀಣ ಉಡುಗೆ ತೊಡುಗೆಗಳು ಇದರ ವಿಶೇಷತೆ. ಕೋಲು ಮತ್ತು ಗೆಜ್ಜೆಗಳು ಈ ಆಟದಲ್ಲಿ ಬಳಸುವ ಮುಖ್ಯ ಪರಿಕರಗಳು. ಈ ಆಟಕ್ಕೆ ಬಳಸುವ ಕೋಲುಗಳು ಸಾಮಾನ್ಯವಾಗಿ ಒಂದೂವರೆ ಅಡಿ ಉದ್ದವಿರುತ್ತವೆ ಕೋಲಾಟದಲ್ಲಿ 59 ವಿಧಗಳಿವೆ ಅವುಗಳಲ್ಲಿ ಸುತ್ತುಕೋಲು, ಚಿಟಿಕೋಲು, ಗೀಚಿನ ಕೋಲು, ತೇರು ಕೋಲು, ಮಿಸಿಕೋಲು, ಕೊರವಂಜಿ ಕೋಲು ಮುಖ್ಯವಾದವು.

ಸೂಚನೆ:- ಮೇಲೆ ಓದಿದ್ದನ್ನು ಜೋರಾಗಿ ಬರೆಯಿರಿ.

ಕಲಿಕಾಫಲ: ವಾಕ್ಯ ರಚನಾ ಕೌಶಲ ಬೆಳೆಸುವುದು.

ಚಟುವಟಿಕೆ: 4 ಸನ್ನನ್ನ ಗಮನಿಸುತ್ತಾ ನಿಮಗೆ ತಿಳಿದಿರುವ ವಾಕ್ಯ ರಚಿಸಿರಿ.



ಚಟುವಟಿಕೆ: 5.

ಕಲಿಕಾಂಶ: ವಿರುದ್ಧಾರ್ಥಕ ಪದಗಳನ್ನು ಗುರುತಿಸುವರು.




ನನ್ನಲ್ಲಿರುವ ವಿರುದ್ಧ ಪದಗಳನ್ನು ಪಟ್ಟಿ ಮಾಡಿ ಬರೆ:

___ × ___  ___ × ___  ___ × ___
___ × ___  ___ × ___  ___ × ___
___ × ___  ___ × ___  ___ × ___
___ × ___  ___ × ___  ___ × ___
___ × ___  ___ × ___  ___ × ___

ಚಟುವಟಿಕೆ: 6.

ಸೂಚನೆ:- ಕೆಳಗಿನ ಪ್ರಶ್ನೆಗಳಿಗೆ ನೋಟ್‌ಪುಸ್ತಕದಲ್ಲಿ ಉತ್ತರ ಬರೆ:-

I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕೋಲಾಟದಲ್ಲಿ ಬಳಸುವ ಕೋಲಿನ ಉದ್ದವೆಷ್ಟು?

___

2. ನೀವು ನಿಮ್ಮ ಮನೆಯಲ್ಲಿ ಆಡುವ ಆಟಗಳನ್ನು ಹೆಸರಿಸಿರಿ?

___

3. ಆಟದಲ್ಲಿ ಗೆದ್ದವರಿಗೆ ಏನನ್ನು ಕೊಡುತ್ತಾರೆ?

___

4. ನಿಮ್ಮ ಊರಿನಲ್ಲಿ ಆಡುವ ಆಟಗಳನ್ನು ಪಟ್ಟಿ ಮಾಡಿರಿ.

___

II ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ:

ಮೇಲೆ × ___

ವಿವಿಧತೆ × ___

ನಿರ್ಗಮಿಸು × ___

ಆದಿ × ___

ಹೊಸ × ___

ಸ್ಪಷ್ಟ × ___

ಸೋಲು × ___

ಹಗಲು × ___

ಜಂಟಿ × ___

ತೆರೆ × ___

Edit with WPS Office

ತರಗತಿ 4

ವಿಷಯ: ಕನ್ನಡ

ಶಾಲಾ ವಾರ್ಷಿಕ ಪತ್ರಿಕೆ.

ದಿನ

ನಿರೀಕ್ಷಿತ ಕಲಿಕಾ ಫಲ:- ಸಂಬಂಧಿಗಳ ಬರವಣಿಗೆಯನ್ನು ಬದಲಿಸುವುದು.

1. * ಮಾದರಿಯಂತೆ ಬರೆ:-

ದೊಡ್ಡಪ್ಪ – ದೊಡ್ಡಮ್ಮ

1. ಅಪ್ಪ – 2. ಅಕ್ಕ – 3. ಅಜ್ಜ –

4. ಅತ್ತೆ – 5. ಹುಡುಗ – 6. ಶಿಕ್ಷಕ –

2. ಕೆಳಗೆ ಕೊಟ್ಟಿರುವ ಉದಾಹರಣೆಯಂತೆ ನಿನಗೆ ತಿಳಿದಿರುವ ಗಾದೆ/ಒಗಟು/ಸುಭಾಷಿತ ಬರೆ.

ಉದಾ:- ಕೈ ಕೆಸರಾದರೆ ಬಾಯಿ ಮೊಸರು.

1. ____________


2. ____________

3. ____________


4. ____________

3. ಕೆಳಗೆ ನೀಡಿರುವ ಆಕಾರಗಳ ಒಳಗೆ ಪದಗಳನ್ನು ಅಥವಾ ವಾಕ್ಯಗಳನ್ನು ಬರೆ:-


ಉದಾ:- ಶಾಲೆ





1. ಉದ್ಯಾನವನ



2. ಕನ್ನಡ ಶಾಲೆ.



3. ವಿರಾಜಮಾನ



ಕೆಳಗೆ ನೀಡಿರುವ ಬೇರೆ ವಾಕ್ಯಗಳ ಕ್ಕೆ ಬರಹವನ್ನು
ಓದಿ ಅರ್ಥ ಮಾಡಿಕೊಳ್ಳುವುದು. ತಪ್ಪಿಲ್ಲದೆ ಓದುವುದು.

ಗಾದೆ ಮಾತು

1) ಕೈ ಕೆಸರಾದರೆ ಬಾಯಿ ಮೊಸರು
2) ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ
3) ಕಲ್ಲಾಗಿ ದುಡಿ ಅರಸನಾಗಿ ಉಣ್ಣು

ಒಗಟು

ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ.

ಉತ್ತರ:- ಮಲ್ಲಿಗೆ ಹೂವು

ಪಿಳ್ಳಾರಯ್ಯ, ಕುಳ್ಳರ ರಾಜ
ಎತ್ತರ ಒಂದೂವರೆ ಮೊಳ
ಪಿಳ್ಳಾರಯ್ಯನ ಹೆಂಡತಿ ಯಲ್ಲಿ
ಆರೇ ಅಂಗುಲ

ಸ್ವಾತಂತ್ರ್ಯ ದಿನಾಚರಣೆಯನ್ನು ಆಗಸ್ಟ್ 15 ರಂದು ಆಚರಿಸುತ್ತೇವೆ.

ನಾನು ಯಾರು?

ಊರಿಗೆಲ್ಲ ಒಂದೇ ಕಂಬಳಿ ?

ಆಕಾಶ

ನಮ್ಮ ದೇಶ ಭಾರತ. ನಾವೆಲ್ಲರೂ ಭಾರತೀಯರು. ನಮಗೆ ಆಗಸ್ಟ್ 15 ರಂದು ಸ್ವಾತಂತ್ರ್ಯ ದೊರಕಿತು. ಗಾಂಧೀಜಿ ಸುಭಾಷ್ ಚಂದ್ರ ಬೋಸ್, ಭಗತ ಸಿಂಗ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು.

ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತೀಕ, ಮಾರ್ಗಶಿರ, ಪುಷ್ಯ, ಮಾಘ. ಫಾಲ್ಗುಣ.

ಕೇಳಿರಿ ಮಕ್ಕಳೇ ಹಾಡು
ಬದುಕಲು ಬೇಕು ನಾಡು
ಕಾಡಲಿ ಮರಗಿಡ ನೀರು
ಕಾಡಿಗೆ ಮೋಡ ಗೆಳೆಯ
ಮೋಡ ಸುರಿಸುವುದು ಮಳೆಯ
ದೊರೆಯುವುದು ಬಗೆ ಬಗೆಯನ್ನ
ಪ್ರಾಣಿ ಪಕ್ಷಿಗಳಿಗೆ ಅದು ಅನ್ನ

ದಿನ ______

5 ರಜಾ ಪತ್ರ ಬರೆಯಲು ಅಭ್ಯಾಸ ಮಾಡು. ಮಾದರಿ ರಜಾಪತ್ರ ಗಟ್ಟಿಯಾಗಿ ಓದು.

## ರಜಾ ಪತ್ರ

ಇಂದ,
ಸುಮನ
4ನೇ ತರಗತಿ
ಸ.ಹಿ.ಪ್ರಾ. ಶಾಲೆ.
ನಾಲಗ್ಗೇರಿ.

ಇವರಿಗೆ,
ತರಗತಿ ಉಪಾಧ್ಯಾಯರು
4ನೇ ತರಗತಿ
ಸ.ಹಿ.ಪ್ರಾ. ಶಾಲೆ. ನಾಲಗ್ಗೇರಿ.

ಪೂಜ್ಯ ಗುರುಗಳಿಗೆ,

ವಿಷಯ:- ಎರಡು ದಿನಗಳ ರಜೆಯನ್ನು ಕೋರಿ.

ನಾನು ನನ್ನ ದೊಡ್ಡಮ್ಮನ ಮನೆಯಲ್ಲಿ ನಡೆಯುವ ಜಾತ್ರೆಗೆ ಹೋಗಬೇಕಾಗಿರುವುದರಿಂದ ದಿನಾಂಕ 02.07.2021-ರಿಂದ 03.07.2021 ರ ವರೆಗೆ ಎರಡು ದಿನಗಳ ರಜೆಯನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ.

ತಮ್ಮ ವಿಧೇಯ ವಿದ್ಯಾರ್ಥಿ
ಸುಮನ

ದಿನಾಂಕ: 01.07.2021
ಸ್ಥಳ: ನಗರ.

ಪೋಷಕರ ಸಹಿ

---

ಮೇಲಿನ ಮಾದರಿಯಂತೆ ನೀನು ಮಾವನ ಮದುವೆಗೆ ಹೋಗುತ್ತಿರುವುದಕ್ಕಾಗಿ ಮೂರು ದಿನಗಳ ರಜೆಯನ್ನು ಕೋರಿ ನಿನ್ನ ತರಗತಿ ಉಪಾಧ್ಯಾಯರಿಗೆ ರಜಾ ಪತ್ರ ಬರೆ.

---

ಇಂದ, ______
______
______

ಇವರಿಗೆ, ______
______
______

ಪೂಜ್ಯ ಗುರುಗಳಿಗೆ,
ವಿಷಯ: ______
______
______
______

ದಿನಾಂಕ:
ಸ್ಥಳ:

ತಮ್ಮ ವಿಧೇಯ ವಿದ್ಯಾರ್ಥಿ

ಪೋಷಕರ ಸಹಿ

ದಿನ

## 6. ಗದ್ಯಾಂಶವನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ನೋಟ್/ಹಾಳೆಯಲ್ಲಿ ಪುಸ್ತಕದಲ್ಲಿ ಉತ್ತರ ಬರೆ:-

ಅಂದು ಶಾಲೆಯಲ್ಲಿ ಪ್ರತೀ ವರ್ಷದಂತೆ ವಾರ್ಷಿಕೋತ್ಸವ. ಮಕ್ಕಳು ಶಾಲೆಗೆ ಸಡಗರದಿಂದ ಬಂದರು. ಆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷರು ವಹಿಸಿಕೊಂಡಿದ್ದರು. ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮದಲ್ಲಿ ಚಿತ್ರಕಲಾ ಸ್ಪರ್ಧೆ, ನೃತ್ಯ, ನಾಟಕ, ಯಕ್ಷಗಾನ, ಭರತನಾಟ್ಯ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಂಡರು. ಕೃಷ್ಣನ ವೇಷಧಾರಿ ವಿದ್ಯಾರ್ಥಿಯೊಬ್ಬ ಎಲ್ಲರನ್ನು ನಕ್ಕುನಲಿಸಿದನು. ಅಂದು ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನವನ್ನು ನೀಡಲಾಯಿತು. ಮಕ್ಕಳ ಚಟುವಟಿಕೆ ನೋಡಿ ಪೋಷಕರು ಸಂಭ್ರಮ ಪಟ್ಟರು. ಶಾಲಾ ಶಿಕ್ಷಕರನ್ನು ಗ್ರಾಮದ ಜನರು ಅಭಿನಂದಿಸಿದರು.

1) ಶಾಲೆಯಲ್ಲಿ ಯಾವ ಕಾರ್ಯಕ್ರಮ ನಡೆಯುತ್ತಿತ್ತು?

2. ಮಕ್ಕಳು ಯಾವ ಯಾವ ಕಾರ್ಯಕ್ರಮದಲ್ಲಿ ಭಾಗವಹಿಸಿದರು?

3. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಾರು ವಹಿಸಿಕೊಂಡಿದ್ದರು?

4. ಸ್ಪರ್ಧೆಯಲ್ಲಿ ಗೆದ್ದವರಿಗೆ ಏನನ್ನು ನೀಡಲಾಯಿತು?

5. ಶಾಲಾ ಶಿಕ್ಷಕರನ್ನು ಯಾರು ಅಭಿನಂದಿಸಿದರು?

# ನಾಲ್ಕನೇ ತರಗತಿ ಸೇತುಬಂಧ

(ಮೂರನೇ ತರಗತಿ ಸಾಮರ್ಥ್ಯ ಆಧಾರಿತ )

## ಘಟಕ: 7. ಹರಿದ ಕಿಸೆ ಅಭ್ಯಾಸ ಹಾಳೆಗಳು

ಸಾಮರ್ಥ್ಯ: ಪರಿಚಿತ ವಸ್ತುಗಳ ಬಗ್ಗೆ ವಿವರಿಸುವರು.

1. ಕೆಳಗಿನ ಸ್ಥಳ ಸನ್ನಿವೇಶ ಗುರ್ತಿಸಿ ಹೆಸರಿಸುವೆಯಾ?

1  ____________________..

2.  ______ ________

3 

____________________

4.  ______________

2.ಒಗಟು ಬಿಡಿಸುವೆಯಾ ಮಗು_.

1.ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ______________________________________..

2.ಅಂಗೈ ಅಗಲ ರೊಟ್ಟಿಗೆ ಲೆಕ್ಕವಿಲ್ಲದಷ್ಟು ಉಪ್ಪಿನಕಾಯಿ______________________________..

3.ಗಿರಗಿರ ತಿರುಗುತ್ತೇನೆ,ಸುಸ್ತಾಗಿ ಬೀಳುತ್ತೇನೆ,ನಾನ್ಯಾರು?.......................................................................

4.ನೋಡಿದರೆ ನೋಡುತ್ತೇನೆ.ನಕ್ಕರೆ ನಗುತ್ತೇನೆ.ನಾನ್ಯಾರು?...............................................................................


5,ಬಾ ಅಂದ್ರೇ ಬರಲ್ಲ.ಹೋಗು ಅಂದ್ರೆ ಹೋಗಲ್ಲ.ನಾನ್ಯಾರು?...............................................................................

ನಿನಗೆ ತಿಳಿದಿರುವ ಒಂದು ಒಗಟು ಬರೆದು ನಿನ್ನ ಗೆಳೆಯನಿಗೆ ಬಿಡಿಸಲು ಬಿಡಿಸಲು ತಿಳಿಸು.

___...

೨.ಈ ಪದ್ಯವನ್ನು ರಾಗವಾಗಿ ಹಾಡುತ್ತಾ ನಕಲು ಮಾಡುವೆಯಾ ಮಗು..

ಒಂದಿನ ನಾನು_____...............................
______________________________
____________________________.
____________________________.
_________________________ಬರುತಿತ್ತು.
ಬಣ್ಣವು ತಿರುಗಿದ__________________
_________________________________
________________________________________..
______________________________________
_____________________..ಹಾಡಿತ್ತು.
ನೋಡುತ______________________________
______________________________________
_____________________.
_________________________
__________________..ಬಿಟ್ಟಿತ್ತು.
ಕರಿದವಲಕ್ಕಿ__________________________
_______________________________..
__________________________________
______________________________
_______________..ಸುರಿದಿತ್ತು.
ಮೆಲ್ಲನೆ __________________________..
__________________________
___________________________..
_________________________..
_______________..ನಗುತ್ತಿತ್ತು.


7

7. ಹರಿದ ಕಿಸೆ

ಒಂದಿನ ನಾನು ಪೇಟೆಗೆ ಹೋದೆನು
ಸಂತೆಯು ನೆರೆದಿತ್ತು.
ಹೂವಿನ ಅಂಗಡಿ ಎದುರಿಗೆ ನಿಲ್ಲಲು
ವಾಸನೆ ಬರುತಿತ್ತು
ಘಮ ಘಮ ವಾಸನೆ ಬರುತ್ತಿತ್ತು ॥೧॥

ಬಣ್ಣವು ತಿರುಗಿದ ಮಾವಿನ ಹಣ್ಣಿನ
ರಾಶಿಯು ಬಿದ್ದಿತ್ತು
ಚೊಣ್ಣದ ಜೇಬಿಗೆ ಕೈಯನು ತುರುಕಿದೆ
ಝಣ ಝಣವೆನುತಿತ್ತು
ಬಾಯೊಳು ತನನನ ಹಾಡಿತ್ತು ॥೨॥

ನೋಡುತ ಮುಂದಕೆ ಹೋದೆನು ನಾನು
ಜಿಲೇಬಿ ನಗುತಿತ್ತು
ದಳೇದ ಉಂಡಿ ಗಡಾದ ಅಂಟು
ಮನವನು ಸೆಳೆದಿತ್ತು
ನನ್ನನು ನಿಲ್ಲಿಸಿ ಬಿಟ್ಟಿತ್ತು ॥೩॥

ಕರಿದವಲಕ್ಕಿ ಹುರಿದಾ ಕಡಲೆ
ಎಲ್ಲಾ ನೆರೆದಿತ್ತು
ಉಬ್ಬಿದ ಪೂರಿ ಬಿಸಿ ಬಿಸಿ ಬಾಜಿ
ಬಾಬಾ ಎನುತಿತ್ತು
ಬಾಯೊಳು ನೀರೇ ಸುರಿದಿತ್ತು ॥೪

ಮೆಲ್ಲನೆ ಜೇಬಿಗೆ ಕೈಯನು ಹಾಕಿದೆ
ಬೆರಳೇ ಹೊರಬಿತ್ತು
ಅಯ್ಯೋ ಅಪ್ಪಾ ಎನ್ನುತ ನೋಡಿದೆ
ಎಲ್ಲವೂ ಬರಿದಿತ್ತು
ಹರಿದಿಹ ಕಿಸೆಯದು ನಗುತ್ತಿತ್ತು ॥೫

ಶಂ.ಗು. ಬಿರಾ

4.ಮಾದರಿಯಂತೆ ಸಮಾನಾರ್ಥಕ ಪದ ಬರೆಯುವೆಯಾ ಮಗು_.

1. ನೀರು = ಜಲ ,ಉದಕ , ಪಾನಿ__..

2 .ಹಣ =____.,____,______..,

3.ಆಕಾಶ =__________,_________.,__________

4.ಹೂವು =_________,_________,__________..

5.ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯುವೆಯಾ ಮಗು___..

1. ಸಂತೆಯು ಎಲ್ಲಿ ನೆರೆದಿತು?

2.ಯಾವ ತಿನಿಸುಗಳು ಮನವನು ಸೆಳೆದಿತ್ತು?

________________________________________

3.ನಿಮ್ಮೂರ ಸಂತೆಯಲ್ಲಿ ನೀನು ಕಾಣುವ ಅಂಗಡಿಗಳನ್ನು ಪಟ್ಟಿಮಾಡುವೆಯಾ?

________________________________________

4.ನೀನು ಹಣ ಕಳೆದುಕೊಂಡ ಸಂದರ್ಭ ಯಾವುದು?ತಿಳಿಸುವೆಯಾ__.

________________________________________.

## 6.ನೀನು ನೋಡಿರುವ ಈ ಕೆಳಕಂಡ ವಸ್ತುಗಳ ಎರಡು ಉಪಯೋಗಗಳನ್ನು ಬರೆಯುವೆಯಾ ಮಗು_?..

1.  ______________________________

2  ______________________________

3  .______________________________

4.  ______________________________

## 7.ಈ ಕೆಳಗಿನ ಚುಟುಕುಗಳನ್ನು ಗಟ್ಟಿಯಾಗಿ ಓದಿ ನಕಲು ಮಾಡು______

*ಎಲೆಗಳ ಮೇಲ್ಗಡೆ ಹೂಗಳ ನಡುವೆ _ ______________________________.

ಮಿರಿಮಿರಿ ಮಿನುಗುವ ಮುತ್ತಿನ ತೆರದಿ ______________________________..

ಹೊಳೆವನು ಝಗಝಗ ವಜ್ರದ ಹಾಗೆ ______________________________.

*ಅಪ್ಪನು ತಂದನು ಬಣ್ಣದ ಪುಗ್ಗಾ ______________________________..

ನನಗಾಯಿತು ಹಿಗ್ಗೋ ಹಿಗ್ಗು ______________________________.

ಕೈಯಲಿ ಹಿಡಿದು ಊದುತಲಿರಲು ______________________________..

ಸಂತೋಷದ ಕ್ಷಣ ಡಬ್ ಎಂದಿತು ________________________________________.

*ದಿನವೂ ಹುಟ್ಟಿ ದಿನವೂ ಮುಳುಗುವ ______________________________________..

ಅಸೆಯು  ಏಕೆ ನಿನ್ನಲ್ಲಿ? ________________________________________..

ಹಗಲಲ್ಲಿ ಆಡಿ ಇರುಳಲ್ಲಿ ಮಲಗುವ ______________________________________..

ಕಾತರವೇ ನಿನ್ನಲ್ಲಿ?. __________________________________________.

*ಕರದಲಿ ಪುಸ್ತಕವಿರಲಿ _________________________________________

ಶಿರದಲಿ ಬುದ್ಧಿಯ ಬೆಳಕಿರಲಿ __________________________________________

ಅರಿವಿನ ಅಮೃತ ನಿನಗಿರಲಿ ________________________________________..

ಅಕ್ಷರದಿಂದ ಅಂಧಕಾರ ನೀಗಿರಲಿ. __________________________________________

*ಟೋಪಿ ಬೇಕು ತಲೆಗೆ ________________________________________________

ನೂಲು ಬೇಕು ರಾಟೆಗೆ ___________________________________________..

ಇದು ಆಗಬೇಕೆಂದರು ಜೀವನಕಲೆ ___________________________________________.

ನಮ್ಮ ತಾತ ಗಾಂಧೀಜಿ. _____________________________________________.

೮. ಈ ಕೆಳಗಿನ ಚಿತ್ರ ನೋಡಿ  ಇದರಲ್ಲಿ ನಿನಗೆ ಇಷ್ಟವಾದ ವಸ್ತುವಿನ ಬಗ್ಗೆ ಎರಡು ವಾಕ್ಯ ಬರೆಯುವೆಯಾ ಮಗು_..

1.. 

2 




ತರಗತಿ: 4 ವಿಷಯ: ಕನ್ನಡ

# ಚಿನ್ನದ ಬೊಂಬೆಗಳು

ಸಾಮರ್ಥ್ಯ:- ಅಪರಿಚಿತ ಸನ್ನಿವೇಶದಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವರು.

ದಿನ: 11, 12, 13

1. ಸೂಚನೆ:- ಈ ಸಂಭಾಷಣೆಯನ್ನು ಓದಿಕೊಂಡು ಕೇಳಲಾದ ಪ್ರಶ್ನೆಗಳಿಗೆ ನೋಟ ಪುಸ್ತಕದಲ್ಲಿ ಉತ್ತರಿಸು.



[ಗೌರಿ ಮತ್ತು ರಮೇಶ ತಂದೆ ತಾಯಿಯೊಂದಿಗೆ ಸಮುದ್ರ ತೀರ ನೋಡಲು ಹೋಗಿದ್ದಾರೆ].

ಗೌರಿ:- ಅಪ್ಪಾ, ಈ ಸಾಗರ ತೀರ ಎಷ್ಟು ಚಂದ!

ತಂದೆ: ಹೌದು, ಅದಕ್ಕಾಗಿಯೇ ಇಷ್ಟೊಂದು ಜನ ಇಲ್ಲಿ ಸೇರಿರೋದು.

ತಾಯಿ: ನೋಡು ಗೌರಿ, ಅಲ್ಲಿ ಮಕ್ಕಳು ಮರಳಿನ ಕೋಟೆ ಕಟ್ಟುತ್ತಿದ್ದಾರೆ.

ರಮೇಶ: ಅಮ್ಮಾ, ಕೋಟೆಯ ಮೇಲೆ ಧ್ವಜವನ್ನು ನೆಟ್ಟಿದ್ದಾರೆ.

ಗೌರಿ: ಅಪ್ಪಾ, ಅಲ್ಲಿ ಹುಡುಗರು ಏನೋ ಆರಿಸುತ್ತಿದ್ದಾರಲ್ಲ?

ತಂದೆ: ಅವರು ಕಪ್ಪೆಚಿಪ್ಪು ಮತ್ತು ಶಂಖಗಳನ್ನು ಆರಿಸುತ್ತಿದ್ದಾರೆ.

ರಮೇಶ: ನೋಡು ಗೌರಿ, ಅಲ್ಲಿ ಬಲೂನು ಮಾರುವವನು ಬರುತ್ತಿದ್ದಾನೆ.

ಗೌರಿ: ಅಪ್ಪಾ, ನನಗೆ ಆ ಬಲೂನು ಕೊಡಿಸುವಿರಾ?

ತಂದೆ: ಸರಿ, ರಮೇಶ ಎರಡು ಬಲೂನು ತೆಗೆದುಕೊಂಡು ಬಾ.

ಗೌರಿ: ಅಮ್ಮಾ, ಅಲ್ಲಿಯವರೆಗೆ ನಾನು ನೀರಿನ ಅಲೆಗಳಲ್ಲಿ ನಿಂತುಕೊಳ್ಳಲಾ?

ತಾಯಿ: ಬೇಡ ಏನಾದರೂ ತೊಂದರೆಯಾದೀತು.

[ಸಾಯಂಕಾಲ ಎಲ್ಲರೂ ಮನೆಗೆ ಹಿಂತಿರುಗುವರು].

ಅ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಈ ಸಂಭಾಷಣೆ ನಡೆದ ಸ್ಥಳ ಯಾವುದು?

______________________________

2) ಈ ಸಂಭಾಷಣೆಯಲ್ಲಿರುವ ಪಾತ್ರಗಳ ಹೆಸರನ್ನು ಬರೆ.

______________________________

3) ಹುಡುಗರು ಸಮುದ್ರ ತೀರದಲ್ಲಿ ಏನನ್ನು ಆರಿಸುತ್ತಿದ್ದಾರೆ?

______________________________

4) ತಂದೆಯವರು ಬಲೂನು ತರಲು ಯಾರಿಗೆ ಹೇಳಿದರು?

______________________________

ಆ) ಈ ಮಾತುಗಳನ್ನು ಯಾರು? ಯಾರಿಗೆ? ಹೇಳಿದರು?

1. "ಅಪ್ಪಾ! ಈ ಸಾಗರ ತೀರ ಎಷ್ಟು ಚಂದ"

______________________________

______________________________

2. "ಅಮ್ಮಾ, ಕೋಟೆಯ ಮೇಲೆ ಧ್ವಜವನ್ನು ನೆಟ್ಟಿದ್ದಾರೆ.

______________________________

______________________________

3. "ಅವರು ಕಪ್ಪೆ ಚಿಪ್ಪು ಮತ್ತು ಶಂಖಗಳನ್ನು ಆರಿಸುತ್ತಿದ್ದಾರೆ"

______________________________

______________________________

ಇ) ಸರಿಯಾದ ಅರ್ಥ ಬರುವಂತೆ ಪದಗಳನ್ನು ಜೋಡಿಸಿ ವಾಕ್ಯ-ಗಳನ್ನು ಸರಿಪಡಿಸಿ ಬರೆ.

1. ಸಮವಸ್ತ್ರ / ಮಕ್ಕಳು / ಧರಿಸಿ / ಬಂದರು / ಶಾಲೆಗೆ

______________________________

2. ಮಕ್ಕಳು / ಸಾಂಸ್ಕೃತಿಕ / ನಡೆಸಿಕೊಟ್ಟರು ಕಾರ್ಯಕ್ರಮ

______________________________

3. ಕೈತೋಟದಲ್ಲಿ / ಶಾಲೆಯ / ಹೂ / ಗಿಡಗಳಿವೆ.

______________________________

ಈ. ಪ್ರತೀ ವೃತ್ತದಿಂದ ಒಂದೊಂದು ಸೂಕ್ತವಾದ ಪದ ಬಳಸಿ ಮಾದರಿಯಂತೆ ಅರ್ಥಪೂರ್ಣ ವಾಕ್ಯ ರಚಿಸಿ ಬರೆ.

ರಾಜ
ರಾಣಿ
ಅವನು
ಅವರು
ಅಣ್ಣಂದಿರು
ಅಕ್ಕಂದಿರು

ಪಕ್ಷಿಗಳನ್ನು
ಸೈನಿಕನನ್ನು
ಪುಸ್ತಕಗಳನ್ನು
ಚಿತ್ರವನ್ನು
ಮರಗಳನ್ನು

ನೋಡಿದನು
ನೋಡಿದಳು
ನೋಡಿದರು
ಓದಿದನು
ಓದಿದಳು
ಬರೆದಳು
ಬರೆದನು

ಮಾದರಿ:- ರಾಣಿ ಪಕ್ಷಿಗಳನ್ನು ನೋಡಿದಳು.

1. ____________________
2. ____________________
3. ____________________
4. ____________________
5. ____________________
6. ____________________
7. ____________________
8. ____________________
9. ____________________
10. ____________________

R.P. KULAL

ಅಭ್ಯಾಸ ಹಾಳೆ ದಿನ: 23

ವಿಷಯ: ಕನ್ನಡ ತರಗತಿ: 4

ಕ್ಷೇತ್ರ : ಮಾತನಾಡುವುದು

ಕಲಿವಿನ ಫಲ: "ಸರಿಯಾದ ಉಚ್ಚಾರಣೆಯೊಂದಿಗೆ ಮಾತನಾಡುವುದು"

ಚಟುವಟಿಕೆ:1- ಕೆಳಗೆ ನೀಡಲಾದ ವಿಷಯಗಳ ಕುರಿತು ನಾಲ್ಕೈದು ವಾಕ್ಯಗಳಲ್ಲಿ ಮಾತನಾಡು.

1. ಮಲ್ಲಿಗೆ ಹೂ 2. ನನ್ನ ನೆಚ್ಚಿನ ಹಬ್ಬ 3. ನಮ್ಮೂರು

4. ಶಾಲೆಯ ಬಿಸಿಯೂಟ 5. ಮಳೆ

ಚಟುವಟಿಕೆ:2 - ಕೊಟ್ಟಿರುವ ವಾಕ್ಯಗಳನ್ನು ತಪ್ಪಿಲ್ಲದಂತೆ, ವೇಗವಾಗಿ ಹಲವು ಬಾರಿ ಹೇಳಿ ನೋಟ್ ಪುಸ್ತಕದಲ್ಲಿ ಬರೆ.

1. ಕಾಗೆ ಪುಕ್ಕ ಗುಬ್ಬಿ ಪುಕ್ಕ
2. ಕೆಂಪು ಕುಂಕುಮ, ಕಪ್ಪು ಕುಂಕುಮ
3. ಬಸಪ್ಪನ ಮನೆಯಲ್ಲಿ ಗಸಗಸೆ ಪಾಯಸ
4. ಹಜಾರದಲ್ಲಿ ಅಣ್ಣ ಬಜಾರದಲ್ಲಿ ಬಣ್ಣ
5. ಪಾತರಗಿತ್ತಿ ಪಕ್ಕಾ ಬಂದಿದ್ದೇನೆಯಕ್ಕಾ

ಚಟುವಟಿಕೆ: 3 - ವಾಕ್ಯಗಳನ್ನು ಗಮನಿಸಿ ತಪ್ಪಾದ ಅಕ್ಷರಗಳನ್ನು ಸರಿಪಡಿಸಿ ಅರ್ಥಪೂರ್ಣ ವಾಕ್ಯ ರಚಿಸು.

1. ಅಕ್ಕಿಯು ಮರದ ಮೇಲೆ ಕುಳಿತಿತು.
2. ನಾರಾಣಪ್ಪನ ಜೇಬು ತುಂಬಾ ದನವಿದೆ.
3. ಮೀನಾಳಿಗೆ ದೋಶೆ ಎಂದರೆ ಆಶೆ.
4. ಬಯಲು ತುಂಬಾ ಧನಗಳು ಮೇಯುತ್ತಿವೆ.
5. ಹಕ್ಕಿಯಿಂದ ಅನ್ನ ಮಾಡುತ್ತಾರೆ.

ಅಭ್ಯಾಸ ಹಾಳೆ ದಿನ: 23

ಚಟುವಟಿಕೆ: ೪ ನಿಮ್ಮ ಶಿಕ್ಷಕರ ಸಹಾಯದಿಂದ ಕೆಳಗೆ ನೀಡಲಾದ ಪದಗಳ ಅರ್ಥ ವ್ಯತ್ಯಾಸವನ್ನು ತಿಳಿ.

ದನ - ಧನ

ಜರಿ - ಝರಿ

ಆರು - ಹಾರು

ಬಾನು - ಭಾನು

ಅಗ್ಗ - ಹಗ್ಗ

ಅಲ್ಲಿ - ಹಲ್ಲಿ

ಪಲ - ಫಲ

ಅಕ್ಕಿ - ಹಕ್ಕಿ

ರೇಖಾ. M.H.
ಸ.ಕಿ.ಪ್ರಾ. ಶಾಲೆ. ಕಲ್ಲುಬಿಳೆ
ಶಿವಮೊಗ್ಗ

ಅಭ್ಯಾಸ ಹಾಳೆ ದಿನ: 24

ವಿಷಯ: ಕನ್ನಡ ತರಗತಿ: 4

ಕಲಿವಿನ ಫಲ: ಸರಿಯಾದ ಸ್ವರಭಾರ ಮತ್ತು ಅಭಿನಯದ ಮೂಲಕ ಗೊತ್ತಿರುವ ಸರಳ ಕಥೆ ಹೇಳುವುದು.

ಚಟುವಟಿಕೆ:೧: ಮಕ್ಕಳಿಂದ ಅವರಿಗೆ ಗೊತ್ತಿರುವ ಕಥೆಗಳನ್ನು ಹೇಳಿಸುವುದು
(ಮಕ್ಕಳಿಂದ ಅವರು ಹೇಳಿದ ಕಥೆಗಳ ವಿಡಿಯೋ ಸಂಗ್ರಹ)

ಚಟುವಟಿಕೆ:೨: ಕೆಳಗೆ ನೀಡಿರುವ ಕಥೆಯನ್ನು ಓದಿ ಅರ್ಥೈಸಿಕೊಂಡು ಮಗು ತನ್ನದೇ ಧಾಟಿಯಲ್ಲಿ ಹೇಳುವುದು.

## ರೈತ ಮತ್ತು ಹದ್ದು



ಒಂದು ಊರಿನಲ್ಲಿ ಒಬ್ಬ ರೈತನಿದ್ದ. ಆ ರೈತ ದಿನಾಲು ತನ್ನ ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಒಮ್ಮೆ ಒಂದು ಹದ್ದು ಬಲೆಯೊಳಗೆ ಸಿಕ್ಕಿಕೊಂಡಿತ್ತು. ಅದನ್ನು ರೈತ ನೋಡಿದ. ಹದ್ದಿನ ಸ್ಥಿತಿ ನೋಡಿ ರೈತನಿಗೆ ಕರುಣೆ ಬಂದಿತು. ಹದ್ದನ್ನು ಬಲೆಯಿಂದ ಬಿಡಿಸಿದ. ಅದು ಸಂತಸದಿಂದ ಹಾರಿ ಹೋಯಿತು.

ಊರ ಹೊರಗೆ ರೈತನ ಮನೆ ಇದ್ದಿತು. ಒಮ್ಮೆ ಆತ ಮನೆಯಲ್ಲಿ ಕುಳಿತಿದ್ದ. ಅವನ ಮನೆಯ ಗೋಡೆ ಕುಸಿಯುವ ಸ್ಥಿತಿಯಲ್ಲಿತ್ತು. ಆಕಾಶದಲ್ಲಿ ಹಾರಾಡುತ್ತಿದ್ದ ಹದ್ದು ಅದನ್ನು ಗಮನಿಸಿತು.

ಹದ್ದು ಒಂದು ನಾಣ್ಯವನ್ನು ಹುಡುಕಿ ತಂದಿತು. ರೈತನಿಗೆ ಕಾಣುವಂತೆ ಸ್ವಲ್ಪ ದೂರದಲ್ಲಿ ಬೀಳಿಸಿತು. ಅದೇನೆಂದು ನೋಡಲು ರೈತ ಎದ್ದು ಹೊರಗೆ ಬಂದನು. ಆಗ ಗೋಡೆ ಕುಸಿಯಿತು. ಅವನಿಗೆ ಹದ್ದು ಬೇಕೆಂದೇ ನಾಣ್ಯ ತಂದು ಹಾಕಿದ್ದು ಎಂದು ತಿಳಿಯಿತು. ತನ್ನ ಜೀವ ಉಳಿಸಿದ ಹದ್ದಿನ ಕಡೆಗೆ ಪ್ರೀತಿಯಿಂದ ನೋಡಿದನು. ಅದಕ್ಕೆ ಕೈ ಮುಗಿದನು. ಹದ್ದು ಹರ್ಷದಿಂದ ಮುಗಿಲ ಕಡೆಗೆ ಹಾರಿ ಹೋಯಿತು.

# ಅಭ್ಯಾಸ ಹಾಳೆ

ದಿನ: 24

**ಚಟುವಟಿಕೆ: ೩- ಕೆಳಗೆ ನೀಡಲಾದ ಚಿತ್ರಗಳನ್ನು ನೋಡಿ ನಿನ್ನದೇ ಮಾತಿನಲ್ಲಿ ವಿವರಿಸು.**









**ಚಟುವಟಿಕೆ: ೪- ಕೆಳಗೆ ನೀಡಲಾದ ವಿಷಯಾಂಶವನ್ನು ಗಟ್ಟಿಯಾಗಿ ಸೂಕ್ತ ಸ್ವರಭಾರದೊಂದಿಗೆ ಓದು.**

ಒಂದು ಭಾನುವಾರದ ಸಂಜೆ ನಾನು, ರತ್ನ ಮತ್ತು ಕೃಷ್ಣ ಮೂವರೂ ಚಿತ್ರ ನೋಡಲು ಹೊರಟೆವು. 'ಭಕ್ತ ಪ್ರಹ್ಲಾದ ಚಿತ್ರ ನಡೆಯುತ್ತಿದ್ದ ಸ್ಟರ್ಲಿಂಗ್ ಥಿಯೇಟರ್ ತಲುಪಿದೆವು. ಆಗಲೇ ಅಲ್ಲಿ 'ಚಿತ್ರ ಮಂದಿರ ತುಂಬಿದೆ ಎಂದು ಫಲಕ ಹಾಕಿತ್ತು. ನಮಗೆ ಬಹಳ ನಿರಾಶೆಯಾಯಿತು.
'ಈಗ ನಾವು ವಸ್ತು ಪ್ರದರ್ಶನಕ್ಕೆ ಹೋಗೋಣವೆ ? - ಎಂದು ಕೃಷ್ಣ ಕೇಳಿದ.
'ಹೌದು, ಶಾಲೆಯಲ್ಲಿ ಗುರುಗಳೂ ಹೇಳಿದರು, ಅಲ್ಲಿ ನೋಡಲು ಬೇಕಾದಷ್ಟು ವಿಷಯಗಳಿವೆಯಂತೆ. - ರತ್ನ ಹೇಳಿದಳು.

ಆಹಾ, ಪ್ರವೇಶದ್ವಾರ ಎಷ್ಟು ಚಂದ ! ಖಡ್ಗ ಹಿಡಿದು ನಿಂತ ಚಾಮುಂಡೇಶ್ವರಿ ಪ್ರತಿಮೆ, ಸುತ್ತಲೂ ಝಗಝಗಿಸುವ ಬಲ್ಬುಗಳು ! ನೀರಿನ ಕಾರಂಜಿ ! ಬಣ್ಣದ ಬೆಲೂನ್ ಹಿಡಿದ ಮಕ್ಕಳು. ನಾವೂ ಉತ್ಸಾಹದಿಂದ ಒಳಗೆ ನಡೆದೆವು.

ರೇಖಾ.M H
ಸ.ಕಿ.ಪ್ರಾ.ಶಾಲೆ. ಕಲ್ಲೂರು.ಶಿವಮೊಗ್ಗ

ಅಭ್ಯಾಸ ಹಾಳೆ

ದಿನ: 25

ವಿಷಯ: ಕನ್ನಡ

ತರಗತಿ: 4

ಕಲಿಕೆಯ ಫಲ: "ಲೇಖನ ಚಿಹ್ನೆಗಳ ಬಳಕೆ"

ಚಟುವಟಿಕೆ: ೧ ಕೆಳಗೆ ನೀಡಲಾದ ಲೇಖನ ಚಿಹ್ನೆಗಳ ಪರಿಚಯ - ದೊಂದಿಗೆ ಶಿಕ್ಷಕರ ಸಹಾಯದಿಂದ ಬಳಕೆಯ ಬಗ್ಗೆ ತಿಳಿ.

1. ಪೂರ್ಣವಿರಾಮ → (.)
2. ಅಲ್ಪವಿರಾಮ → (,)
3. ಉದ್ಧರಣ ಚಿಹ್ನೆ → (" ") (' ')
4. ಭಾವಸೂಚಕ ಚಿಹ್ನೆ → (!)
5. ಪ್ರಶ್ನಾರ್ಥಕ ಚಿಹ್ನೆ → (?)

ಚಟುವಟಿಕೆ: ೨ ಕೆಳಗೆ ನೀಡಲಾದ ವಾಕ್ಯಗಳನ್ನು ಓದಿ ಸೂಕ್ತ ಸ್ಥಳದಲ್ಲಿ ಲೇಖನ ಚಿಹ್ನೆ ಬರೆ.

1. ಇದು ಯಾವ ಆಟ ಇರಬಹುದು
2. ಆಹಾ ಈ ಜಲಪಾತ ಎಷ್ಟು ಅದ್ಭುತವಾಗಿದೆ
3. ರಜಾ ದಿನದಂದು ರವಿ ಸುಮ ಮೀಟರ್ ರೇಖಾ ಗದ್ದೆ ಬಯಲಿಗೆ ಬಂದರು

ರೇಖಾ.M.H
ಸ.ಕಿ.ಪ್ರಾ.ಶಾಲೆ.ಕಲ್ಲೂರ್ಕಿ
ಶಿವಮೊಗ್ಗ

Edit with WPS Office

ತರಗತಿ :- 4ನೇ 26ನೇ ದಿನ ವಿಷಯ:- ಕನ್ನಡ

ಕಲಿವಿನ ಫಲಗಳು :--- ಪಠ್ಯದಲ್ಲಿರುವ ಮುಖ್ಯ ವಿಷಯಗಳನ್ನು ಗುರ್ತಿಸುವರು. ಕ್ಷೇತ್ರ :-- ಆಲಿಸುವುದು
ಕಲಿಕಾಂಶ:--- ಪದ್ಯವನ್ನು ರಾಗವಾಗಿ ಮತ್ತು ಭಾವಪೂರ್ಣವಾಗಿ ಹಾಡಲು ಸಮರ್ಥರನ್ನಾಗಿ ಮಾಡುವುದು.

ಚಟುವಟಿಕೆ:--1 ಪದ್ಯವನ್ನು ರಾಗವಾಗಿ ಹೇಳಿರಿ



ಕೇಳಿರಿ ಮಕ್ಕಳೆ ನಾಳಿನ ಪ್ರಜೆಗಳೆ
ಕೇಳಿರಿ ಹೇಳುವೆ ಮಾತೊಂದ ।
ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ
ಕಿತ್ತೂರು ರಾಣಿಯ ಕಥೆಯೊಂದ ॥

ಬೆಳಗಾಂ ಜಿಲ್ಲೆಯ ಕಾಕತಿಯಲ್ಲಿ
ವೀರ ಪುತ್ರಿಯು ಜನಿಸಿಹಳು ।
ದೂಳಪ್ಪ ದೇಸಾಯಿ ಪದ್ಮಾವತಿಯ
ಕುಲಪುತ್ರಿಯೇ ಚೆನ್ನಮ್ಮ ॥

ತಂದೆಯೊಡನೆ ಪುರುಷ ವೇಷದಿ
ಬೇಟೆಗೆ ಕಾಡಿಗೆ ಹೋಗಿಹಳು ।
ಕತ್ತಿ ವರಸೆ ಬಿಲ್ಲು ಬಾಣ
ಕುದುರೆ ಸವಾರಿಯ ಕಲಿತಿಹಳು ॥

ಕಿತ್ತೂರು ದೊರೆ ಮಲ್ಲಸರ್ಜನ
ಪ್ರೀತಿಯ ಮಡದಿ ಎನಿಸಿಹಳು ।
ಮಲ್ಲಸರ್ಜನ ಮರಣ ನಂತರ
ಕಿತ್ತೂರು ರಾಣಿಯೇ ಆಗಿಹಳು ॥



ಕಿತ್ತೂರು ನಾಡಿನ ಸ್ವಾತಂತ್ರ್ಯಕ್ಕಾಗಿ
ಬ್ರಿಟಿಷರ ವಿರುದ್ಧ ಹೋರಾಡಿಹಳು ।
ಥ್ಯಾಕರೆಯನ್ನು ಸೋಲಿಸಿ ಅವಳು
ವೀರವನಿತೆ ಎನಿಸಿಹಳು ॥

2:-- ಪದ್ಯದಲ್ಲಿ ನಿನಗೆ ಇಷ್ಟವಾದ ಪದ್ಯಭಾಗಕ್ಕೆ ಸಾರಾಂಶ ಬರೆಉದಾಹರಣೆ:-- ಕಿತ್ತೂರು ನಾಡಿನ ಸ್ವಾತಂತ್ರ್ಯಕ್ಕಾಗಿ ರಾಣಿ ಚೆನ್ನಮ್ಮ ವೀರಾವೇಶದಿಂದ ಬ್ರಿಟಿಷರ ವಿರುದ್ಧ ಹೋರಾಡಿ ಬ್ರಿಟಿಷರ ಥ್ಯಾಕರೆಯನ್ನು ಸೋಲಿಸಿ ವೀರವನಿತೆ ಎಂಬ ಬಿರುದು ಪಡೆದಳು.

(5 ನೇ ಪದ್ಯಭಾಗ)

ಉಳಿದ ಯಾವುದೇ ನಿಮಗೆ ಇಷ್ಟವಾದ ಪದ್ಯ ಭಾಗಕ್ಕೆ ಸಾರಾಂಶ ಬರೆಯಿರಿ

Edit with WPS Office

**ನಾಲ್ಕನೇ ತರಗತಿ** **27 ನೇ ದಿನ** **ವಿಷಯ ಕನ್ನಡ**

**ಕಲಿಕಾಂಶ:---ಪಠ್ಯವನ್ನು ಆಲಿಸಿದ ನಂತರ ಏಕೆ ಎಂಬ ಪ್ರಶ್ನೆಗೆ ಉತ್ತರಿಸುವರು.**

## ೧:-- ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.

1)ನಿಮಗೆ ಈ ಪದ್ಯ ಇಷ್ಟವಾಗಲು ಕಾರಣ ಕೊಡಿ.

2)ನಿಮಗೆ ಇಷ್ಟವಾದ ಇಬ್ಬರು ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಹೆಸರಿಸಿರಿ.

3)ಯಾವ ಕಾರಣಕ್ಕಾಗಿ ವೀರವನಿತೆ ಕಿತ್ತೂರಿನ ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿದಳು?

4)ಕಿತ್ತೂರು ರಾಣಿ ಚೆನ್ನಮ್ಮಯಾರ ವಿರುದ್ಧ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದಳು?

## ೨:-- ಆಗಸ್ಟ್ 15 ಸ್ವಾತಂತ್ರ್ಯ ದಿನದ ಆಚರಣೆಯ ಉದ್ದೇಶ ಮತ್ತು ಹಿನ್ನೆಲೆಯನ್ನು ನಿಮ್ಮದೇ ಆದ ಮಾತುಗಳಲ್ಲಿ ತಿಳಿಸಿರಿ ಉದಾಹರಣೆಗೆ ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆಯ ದಿನ ಶಾಲೆಯಲ್ಲಿ ಕೈಗೊಳ್ಳುವ ಚಟುವಟಿಕೆಗಳ ಬಗ್ಗೆ ತಿಳಿಸಿರಿ *

*ಸ್ವಾತಂತ್ರ್ಯ ದಿನಾಚರಣೆಯನ್ನು ಯಾವ ದಿನದಂದು ಆಚರಿಸುವೆವು?____________________________

*ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ತಿಳಿಸಿ.________________

*ಶಾಲೆಗಳಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬಗಳನ್ನು ತಿಳಿಸಿ.___________________________________

*ಗಾಂಧೀ ಜಯಂತಿ ಯಾವ ದಿನದಂದು ಆಚರಿಸುತ್ತೇವೆ?_________________________________

### ೩:-- ಕೆಳಕಂಡ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1)ಕಿತ್ತೂರಿನ ರಾಣಿ ಯಾರು?

ಉತ್ತರ:---

2)ಕಿತ್ತೂರು ರಾಣಿ ಚೆನ್ನಮ್ಮ ಎಲ್ಲಿ ಜನಿಸಿದಳು?

ಉತ್ತರ:---

3)ನಾಳಿನ ಪ್ರಜೆಗಳು ಎಂದು ಈ ಪದ್ಯದಲ್ಲಿ ಯಾರಿಗೆ ಕರೆಯಲಾಗಿದೆ?

Edit with WPS Office

## 28ನೇ ದಿನ

**ಸಾಮರ್ಥ್ಯ/ ಕಲಿಕಾಂಶ:--**

ಪದ್ಯವನ್ನು ಓದಿದ ಮೇಲೆ ಯಾರು? ಯಾವಾಗ? ಎಲ್ಲಿ ?ಏನು? ಏಕೆ ?ಎಂಬ ಪ್ರಶ್ನೆಗಳಿಗೆ ಉತ್ತರಿಸುವರು.

**ಚಟುವಟಿಕೆ 1:--**

**ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.**

1:--ಕಿತ್ತೂರು ರಾಣಿ ಚೆನ್ನಮ್ಮನ ತಂದೆ ತಾಯಿ ಯಾರು?____________________________


2:--ಚೆನ್ನಮ್ಮ ಯಾರ ಜೊತೆ ಬೇಟೆಗೆ ಹೋಗುತ್ತಿದ್ದಳು?______________________________

3:--ಕಿತ್ತೂರು ದೊರೆ ಯಾರು?_______________________________________________

4:--ಚೆನ್ನಮ್ಮಯಾವಾಗ ಕಿತ್ತೂರು ರಾಣಿಯಾದಳು?________________________________

5:--ಚೆನ್ನಮ್ಮ ನಿನಗೆ ಇಷ್ಟವಾಗಲು ಕಾರಣವೇನು?__________________________________

**ಚಿತ್ರಕ್ಕೆ ಸಂಬಂಧಿಸಿದಂತೆ ಪದ್ಯ ರಚಿಸಿ.**



**ಕವಿತಾ ಕೆ.ಬಿ   ಸ.ಕಿ.ಪ್ರಾ.ಶಾಲೆ ಇಡುಕಿನ ಹೊಸಕೊಪ್ಪ ಶಿಕಾರಿಪುರ(ತಾ)**